


International Journal of Kannada Research
www.kannadajournal.com

ISSN: 2454–5813
IJKR 2024; 10(3): 11-15
© 2024 IJKR
www.kannadajournal.com
Received: 09-05-2024
Accepted: 14-06-2024

**Dr. Savitha B**
Assistant Professor, PG Studies & Research in Kannada, Govt. College Kasaragod, Kerala, India

**Corresponding Author:**
**Dr. Savitha B**
Assistant Professor, PG Studies & Research in Kannada, Govt. College Kasaragod, Kerala, India

# ಕಾಸರಗೋಡಿನ ಪ್ರಾಚೀನ ಯಕ್ಷಗಾನ ಮೇಳಗಳು ಮತ್ತು ಪ್ರಸ್ತುತ ಸ್ಥಿತಿಗತಿಗಳು

## Dr. Savitha B

**ಪೀಠಿಕೆ**

ತೌಳವ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿ ಯಕ್ಷಗಾನ ದಕ್ಷಿಣ ಕರ್ನಾಟಕದಾದ್ಯಂತ ಪ್ರಸಿದ್ಧಿಯನ್ನು ಪಡೆದಿದೆ. ನೃತ್ಯ, ಸಂಗೀತ, ಸಾಹಿತ್ಯ, ಅಭಿನಯ, ನಾಟಕೀಯತೆಗಳನ್ನು ಒಳಗೊಂಡಿರುವ ಕಲಾರೂಪವೇ ಯಕ್ಷಗಾನವೆನ್ನಬಹುದು. ವೈವಿಧ್ಯಮಯ ಕಲಾರಾಧನೆಯ ಮೂಲಕ ದೇವ ದೇವತೆಯರನ್ನು ಆರಾಧಿಸುವ ಕ್ರಮ ಪ್ರಾಚೀನ ಕಾಲಗಳಿಂದಲೂ ಬಳಕೆಯಲ್ಲಿತ್ತು. ಯಕ್ಷಗಾನ ಕ್ಷೇತ್ರಕ್ಕೆ ಕಾಸರಗೋಡಿನ ಕೊಡುಗೆ ಅಪಾರವಾದುದು ಮತ್ತು ಕಾಸರಗೋಡು ಆಸು ಪಾಸಿನ ದೇವತಾ ಕ್ಷೇತ್ರಗಳನ್ನು ಆಧರಿಸಿ ಯಕ್ಷಗಾನ ಕಲೆ ನೆಲೆ ನಿಂತಿದೆ. ಈ ಕಲೆಯ ಹುಟ್ಟಿನ ಹಿನ್ನೆಲೆಯಲ್ಲಿ ದೇವಾಲಯಗಳೇ ಯಕ್ಷಗಾನದ ಆಶ್ರಯವಾಗಿದ್ದ ಕಾಲವೊಂದಿತ್ತು. ದೇವಾಲಯಗಳಿಂದ ಹೊರಟ ಮೇಳಗಳು ಕರ್ನಾಟಕದಾದ್ಯಂತ ಸಂಚರಿಸಿ ತಮ್ಮ ಸೇವೆಯಾಟಗಳನ್ನು ಪ್ರದರ್ಶಿಸುವ ಮೂಲಕ ಪ್ರಸಿದ್ಧಿಯ ಉತ್ತುಂಗ ಶಿಖರಕ್ಕೇರಿ ಮೇರೆದಿದ್ದವು. ಕಾಸರಗೋಡಿನ ಪುಣ್ಯ ನೆಲದಲ್ಲಿ ಅನೇಕ ಯಕ್ಷಗಾನ ಮೇಳಗಳು, ಸಂಘ ಸಂಸ್ಥೆಗಳು ಹುಟ್ಟಿಕೊಂಡು ಸೇವೆ ಸಲ್ಲಿಸಿ ಬಾಳಿ ಬದುಕಿವೆ. ಕಾಲದ ಓಟದಲ್ಲಿ ಕೆಲವೊಂದು ಮೇಳಗಳು, ಸಂಘ ಸಂಸ್ಥೆಗಳು ಕಣ್ಮರೆಯಾದರೂ ಕೆಲವು ಈಗಲೂ ನಿತ್ಯ ಚಟುವಟಿಕೆಯಿಂದ ಕೂಡಿವೆ. ದಕ್ಷಿಣ ಕರ್ನಾಟಕ ಹಾಗೂ ಕಾಸರಗೋಡಿನ ಸುತ್ತುಮುತ್ತಲಿನ ಪರಿಸರದಲ್ಲಿ ಈಗಲೂ ತನ್ನ ಸಾಂಪ್ರದಾಯಿಕ ಕಲಾ ಗಾಂಭೀರ್ಯತೆಯಿಂದ ಅಸ್ತಿತ್ವವನ್ನು ಕಂಡುಕೊಂಡಿರುವ ಯಕ್ಷಗಾನ ಪರಂಪರೆಯನ್ನು ರೂಪಿಸಿರುವಂತಹ ಪ್ರಾಚೀನ ಮೇಳಗಳ ಹುಟ್ಟಿನ ಹಿನ್ನೆಲೆ, ದೇವಾಲಯ ಮತ್ತು ಮೇಳಗಳ ಸಂಬಂಧ, ಆ ಕಾಲದ ಮೇಳಗಳ ವೈಶಿಷ್ಟ್ಯಗಳು, ಪ್ರಸ್ತುತ ಸ್ಥಿತಿಗತಿಗಳು ಇತ್ಯಾದಿ ವಿಷಯಗಳನ್ನು ದಾಖಲಿಸುವ ಒಂದು ಸಣ್ಣ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಲಾಗಿದೆ.

ಯಕ್ಷಗಾನವು ಆರಾಧನಾ ರೂಪಿಯಾದ ಕಲೆಗಳಲ್ಲಿ ಅತ್ಯಂತ ಶ್ರೇಷ್ಠವಾದುದು. ಆಟಿಕಳಂಜ, ಸೋಣೆಜೋಗಿ, ಭೂತಗಳು, ಭೂತಕೋಲಗಳು ಇವುಗಳಿಂದ ಸ್ಫೂರ್ತಿ ಪಡೆದು, ಇದರದ್ದೇ ಆದ ಒಂದು ವಿಕಾಸವು ಯಕ್ಷಗಾನದ ರೂಪು ಪಡೆದು ಬೆಳೆದುಬಂದಿರಬೇಕು. ಭೂತಕೋಲಗಳಲ್ಲಿ ಭೂತಗಳ ಆವೇಶ ಕಂಡುಬಂದರೆ, ಯಕ್ಷಗಾನದಲ್ಲಿ ದೇವತೆಗಳ ಆವೇಶವನ್ನು ಕಾಣಬಹುದು. ಈ ಆರಾಧನಾ ಕಲೆಯ ಹುಟ್ಟಿನ ಹಿನ್ನೆಲೆಯನ್ನು ಗಮನಿಸುವಾಗ ದೇವಸ್ಥಾನವೇ ಕೇಂದ್ರವಾಗಿ ದೇವಸ್ಥಾನದ ಮೇಳದ ಮೂಲಕವಾಗಿಯೇ ಯಕ್ಷಗಾನ ರೂಪುಗೊಂಡಿರುವುದು ಕಂಡುಬರುತ್ತದೆ.

ದೇವಸ್ಥಾನಗಳಲ್ಲಿ ನಡೆಯುವ ಐದು, ಏಳು ದಿನಗಳ ಜಾತ್ರೋತ್ಸವಗಳಲ್ಲಿ ಉತ್ಸವ ಮೂರ್ತಿಯನ್ನು ವಸಂತ ಕಟ್ಟೆಯಲ್ಲಿಟ್ಟು ಪೂಜಿಸುವ ಪದ್ಧತಿ ರೂಢಿಯಲ್ಲಿದೆ. ಈ ಸಂದರ್ಭದಲ್ಲಿ 'ಉಪಚಾರ ಪೂಜೆ' ಎನ್ನುವುದು ಮುಖ್ಯ ಸ್ಥಾನ ಪಡೆದುಕೊಂಡಿದೆ. ಉಪಚಾರ ಪೂಜೆ ಎಂದರೆ 'ಹೊಗಳಿಕೆ' ಎಂಬರ್ಥವಿದೆ. ಈ ಸಂದರ್ಭದಲ್ಲಿ 'ಪಾಟಾಳಿ'(ಮುಖ್ಯಸ್ಥ) ದೇವರಿಗೆ ಗೇಯ ಹಾಡುಗಳನ್ನು ಹಾಡುವ ಮೂಲಕ ತನ್ನ ಸೇವೆಯನ್ನು ಸಲ್ಲಿಸುತ್ತಿದ್ದ. ತದನಂತರ ದೇವದಾಸಿ ಪಂಗಡದ ಗಂಡಸರಿಂದ ಸಂಗೀತ ಸೇವೆ. ಈ ಸೇವೆಯ ಜೊತೆಗೆ ಪಾಟಾಳಿಯು 'ನಾಟ್ಯಂ ಅವಧಾರಯ' ಎಂದು ಘೋಷಿಸಿದಾಗ ದೇವದಾಸಿ ಸ್ತ್ರೀಯರಿಂದ ನರ್ತನ. ಆನಂತರ ವಾದ್ಯ ಸೇವೆ ನಡೆಯುತ್ತಿತ್ತು. ಈ ರೀತಿಯಲ್ಲಿ ದೇವರಿಗೆ ಸಲ್ಲಿಸುವ 'ಅಷ್ಟಾವಧಾನದ ಉಪಚಾರ'ವೇ ಪ್ರೇರಣೆಯಾಗಿ ದೇವರ ಆರಾಧನೆ ಎನ್ನುವ ನಿಟ್ಟಿನಲ್ಲಿ ಗೀತ, ವಾದ್ಯ, ನೃತ್ಯಗಳನ್ನು ಸಮನ್ವಯಗೊಳಿಸಿ 'ಮೇಳ ಕಟ್ಟುವ' ಸಿದ್ಧತೆಗೆ ದೇವಾಲಯಗಳು ತೊಡಗಿದುವು. ಈ ಸಂದರ್ಭದಲ್ಲಿ ಮೊಕ್ತೇಸರರ ಅಧೀನದಲ್ಲಿ ಇದ್ದವರಿಗೆ ವೇಷ ಹಾಕುವ ಯೋಗವು ಸಿದ್ಧಿಸಿತು.

ದೇವಸ್ಥಾನಗಳ ಪ್ರಧಾನ ದೈವಗಳ ಪಾತ್ರಿಗಳಾದ ಗಾಣಿಗರು, ಚಾಲ್ಯರು, ಮಣಿಯಾಣಿಗಳು ಇವರಿಗೆ ದೈವ ಸಂಬಂಧಿ ದೈವಾವೇಶ, ನರ್ತನ ನೋಡಿ ಅರಿವಿದ್ದುದರಿಂದ ಬಣ್ಣ ಹಚ್ಚಿ ವೇಷಗಳನ್ನು ಹಾಕಿಸಲಾಯಿತು. ಪ್ರಥಮವಾಗಿ ರಂಗ ಪ್ರವೇಶ ಮಾಡಿದವರಲ್ಲಿ ಇವರೇ ಮೊದಲಿಗರಾದರು. ಸ್ಥಾನಿಕ ಬ್ರಾಹ್ಮಣರು ಯಕ್ಷಗಾನಕ್ಕೆ ಸಂಬಂಧಪಟ್ಟಂತೆ ಕವಿಗಳು, ಸಂಗೀತಗಾರರು ಹಾಗೂ ಮೇಳದ ದಾನಿಗಳಾದರು. ಹೀಗೆ 'ಮೇಳ'ಗಳ ಹುಟ್ಟಿನ ಹಿನ್ನೆಲೆಯಲ್ಲಿ ದೈವರಾಧನೆ ಪ್ರಮುಖ ಪಾತ್ರವಹಿಸಿರುವುದು ಕಂಡುಬರುತ್ತದೆ. ಯಕ್ಷಗಾನ ವೇಷ ರಂಗಪ್ರವೇಶ ನಡೆಸುವ ಮೊದಲು ಮಾಡುವ ಕ್ರಿಯೆಗಳಿಗೂ ದೈವಗಳಿಗೆ ನಡೆಸುವ ಕ್ರಿಯೆಗಳಿಗೂ ಸಾಮ್ಯತೆಯಿರುವುದು ದೈವದ ಆರಾಧಕರೇ ಯಕ್ಷಗಾನದಲ್ಲಿಯೂ ತೊಡಗಿಸಿಕೊಂಡುದನ್ನು ಸೂಚಿಸುತ್ತದೆ.

ಕುಂಬಳೆಯ ರಾಜರ ಕಾಲದಲ್ಲಿ ತೆಂಕುತಿಟ್ಟಿನ ಯಕ್ಷಗಾನ ಪ್ರದೇಶದಲ್ಲಿ ಯಕ್ಷಗಾನಕ್ಕೆ ಪ್ರಥಮ ಆಚಾರ್ಯರಾಗಿ ಸ್ಥಾನಿಕ ಬ್ರಾಹ್ಮಣರನ್ನು ಹೆಸರಿಸಲಾಗುತ್ತದೆ. ರಾಜರ ಕಾಲದಲ್ಲಿ ಇವರಿಗೆ ಮೊದಲ ಮನ್ನಣೆ. ಇವರಿಗೆ ದೇವಸ್ಥಾನವೇ ಆಧಾರವಾಗಿದ್ದ ಕಾಲವಾಗಿತ್ತದು. ಇವರಲ್ಲಿ ಯಕ್ಷಗಾನ ಕವಿಗಳು, ಕಲಾವಿದರು, ಪೋಷಕರು ಅದೆಷ್ಟೋ ಮಂದಿ ಇದ್ದರು. ಇವರಲ್ಲಿ ಕೂಡ್ಲು ಸುಬ್ರಾಯ ಶ್ಯಾನುಭಾಗರು, ಕುಂಬಳೆಯ ಪಾರ್ತಿಸುಬ್ಬ ಮುಖ್ಯರು. ಯಕ್ಷಗಾನದ ಆಚಾರ್ಯ ಪುರುಷ ಪಾರ್ತಿಸುಬ್ಬನ ಊರಾದ ಕುಂಬಳೆ ಯಕ್ಷಗಾನ ಕಲೆಯ ಕೇಂದ್ರ ಸ್ಥಳ.

'ಮುದದಿಂ ನಿನ್ನ ಕೊಂಡಾಡುವೆನು ಅನವರತ
ಮದವೂರು ವಿಘ್ನೇಶ ದೇವ ಜಗದೀಶ'

ಎಂದು ಮಧೂರಿನ ಶ್ರೀ ಸಿದ್ಧಿವಿನಾಯಕನನ್ನು ಪ್ರಾರ್ಥನೆಯ ಮೂಲಕ ಒಲಿಸಿಕೊಳ್ಳದ ಯಕ್ಷಗಾನ ಕವಿಗಳಿಲ್ಲ. ಮಧೂರು ಗಣಪತಿಯಲ್ಲದೆ, ಕಣಿಪುರ ಗೋಪಾಲಕೃಷ್ಣ ದೇವರು ಪಾರ್ತಿಸುಬ್ಬನಿಂದ ಸ್ತುತಿಸಲ್ಪಟ್ಟಿದ್ದಾರೆ. ಕುಂಬಳೆಯಲ್ಲಿಯೇ ಹುಟ್ಟಿ ಬೆಳೆದ ಪಾರ್ತಿಸುಬ್ಬನು ತನ್ನ ಯಕ್ಷಗಾನ ಪ್ರಸಂಗಗಳೆಲ್ಲವನ್ನೂ ಇಲ್ಲಿಯೇ ರಚಿಸಿ ತೆಂಕುತಿಟ್ಟಿನ ಯಕ್ಷಗಾನದ ಜನಕನೆಂಬ ಬಿರುದನ್ನು ಪಡೆದಿದ್ದಾನೆ. ಪಾರ್ತಿಸುಬ್ಬನು ರಚಿಸಿರುವ ಯಕ್ಷಗಾನ ಪ್ರಸಂಗ ಸಾಹಿತ್ಯಗಳೆಂದರೆ: ಪುತ್ರಕಾಮೇಷ್ಟಿ, ಪಟ್ಟಾಭಿಷೇಕ, ಪಂಚವಟಿ, ವಾಲಿ ಸುಗ್ರೀವರ ಕಾಳಗ, ಚೂಡಾಮಣಿ, ಸೇತುಬಂಧನ, ಅಂಗದ ಸಂಧಾನ, ಕುಂಭಕರ್ಣ ಕಾಳಗ, ಇಂದ್ರಜಿತು ಕಾಳಗ, ಲವಕುಶರ ಕಾಳಗ, ಬಾಲಲೀಲೆ, ಐರಾವತ ಹೀಗೆ ಒಟ್ಟು ಹನ್ನೊಂದು ಕೃತಿಗಳು. ಕುಂಬಳೆ ದೇವಸ್ಥಾನದ ಪಾಟಾಳಿಗಳ ಪರಂಪರೆಗೆ ಸೇರಿದವನಾದ ಪಾರ್ತಿಸುಬ್ಬನು 1797ರಲ್ಲಿ ಮಧೂರಿನಲ್ಲಿ ನಡೆದಿದ್ದ ಮೂಡಪ್ಪ ಸೇವೆಯ ಸಂದರ್ಭದಲ್ಲಿ ಕನ್ನಡದಲ್ಲಿ ತನ್ನ ಹೆಸರನ್ನು ಕೆತ್ತಿದ ತಾಮ್ರದ 'ಧಾರೆಬಟ್ಟಲ'ನ್ನು ದೇವಸ್ಥಾನಕ್ಕೆ ನೀಡಿದ್ದನು ಎನ್ನುವ ವಿವರ ಯಕ್ಷಗಾನ ಸಂಬಂಧಿ ಲೇಖನಗಳಲ್ಲಿ ಉಲ್ಲೇಖಗೊಂಡಿದೆ. ಕುಂಬಳೆ ಮೇಳವಲ್ಲದೆ ಅದಕ್ಕಿಂತಲೂ ಹಿಂದೆಯೇ ಕುತ್ಯಾಳ(ಕೂಡ್ಲು), ಇಚ್ಲಂಪಾಡಿಗಳಲ್ಲಿ ಪ್ರಸಿದ್ಧ ಕಲಾವಿದರನ್ನೊಳಗೊಂಡ ಮೇಳಗಳಿದ್ದುವು. ನಾರಂಪಾಡಿ ಭಾಗವತರು, ಬಲಿಪ ಭಾಗವತರು, ಬೆಳಿಂಜ ಮೈಂದಪ್ಪ ರೈಗಳು, ಕೋಟೆಕುಂಜ ಮಹಾಬಲ ನೋಂಡರು, ಕುಂಬಳೆ ಗುಂಡ, ಕುಂಬಳೆ ತಿಮ್ಮಪ್ಪ, ಮೃದಂಗದ ಬಾಬು ರೈ, ಕೀರಿಕ್ಕಾಡು ಮಾಸ್ಟರ್, ಶೇಣಿ ಗೋಪಾಲಕೃಷ್ಣ ಭಟ್ ಮೊದಲಾದ ಪ್ರಸಿದ್ಧ ಯಕ್ಷಗಾನ ಕಲಾವಿದರು ಕಾಸರಗೋಡಿನವರು.

**ಮೇಳಗಳು**

ತುಳುನಾಡಿನಲ್ಲಿ ಅನೇಕ ಹೆಸರಾಂತ ಮೇಳಗಳಿದ್ದುವು. ಈ ಮೇಳಗಳನ್ನು ಅವುಗಳನ್ನು ವಹಿಸಿಕೊಂಡಿದ್ದ ಮಾಲಿಕರು ನಡೆಸುತ್ತಿದ್ದರು. ಭಾಗವತರು, ಮುಮ್ಮೇಳದವರು, ಹಿಮ್ಮೇಳದವರು ಮತ್ತು ಇವರ ಜೊತೆಗೆ ಸಹಾಯಕರಾಗಿ ಇರುವವರು, ಇವರೆಲ್ಲರ ಕೂಟಕ್ಕೆ 'ಮೇಳ'ವೆಂದು ಹೆಸರು. ತುಳಸೀ ಹಬ್ಬ ಮುಗಿದೊಡನೇ ಅಥವಾ ಮಳೆಗಾಲ ಮುಗಿದೊಡನೇ ಮೇಳಗಳನ್ನು ಹೊರಡಿಸುತ್ತಿದ್ದರು. ನಿಗದಿತವಾದ ವೇಷಗಳನ್ನು ಧರಿಸಿ ಸುಮುಹೂರ್ತದಲ್ಲಿ ಆರಂಭಿಸುವ ಆಟಕ್ಕೆ ಗೆಜ್ಜೆ ಕಟ್ಟುವ ಆಟ' ವೆಂದು ಕರೆಯುವರು. 'ಪಾಂಡವಾಶ್ವಮೇಧ' ದ ಪ್ರಸಂಗವನ್ನಿಟ್ಟುಕೊಂಡು ಆರಂಭದ ಆಟ ನಡೆಯುವುದು ವಾಡಿಕೆಯಾಗಿತ್ತು. ಮಧೂರು, ಕುಂಬಳೆ ದೇವಾಲಯಗಳಲ್ಲಿ ಸೇವೆಯಾಟವನ್ನು ಆಡಿದ ಬಳಿಕ ಮನೆ ಮನೆಗೆ ಸಾಗಿ ಆಟಗಳು ನಡೆಯುತ್ತಿದ್ದುವು. ಒಂದು ದಿನದ ಆಟಕ್ಕೆ ತಗಲುವ ಹಣವನ್ನು 'ವೀಳ್ಯ'ವೆಂದು ಕರೆಯುತ್ತಾರೆ. ಮೇಳದವರು ನಡೆಸುವ ಆಟ ನಿಶ್ಚಯವಾದ ಕಡೆ ಅದಕ್ಕೆ ಬೇಕಾದ ಪೂರ್ವ ತಯಾರಿಗಳು ನಡೆದು, ಕತ್ತಲಾದೊಡನೆ ಅಲ್ಲಿ 'ಕೇಳಿ' ಬಡಿಯುತ್ತಿದ್ದರು. ಚಂಡೆ ಮದ್ದಳೆಯನ್ನು ಬಡಿದು ಶಬ್ದ ಉಂಟುಮಾಡುವುದರ ಮೂಲಕ ಊರಿನವರಿಗೆ ಆಟದ ವಿಷಯವನ್ನು ತಿಳಿಯಪಡಿಸುವುದೇ ಈ 'ಕೇಳಿ' ಬಡಿಯುವುದರ ಉದ್ದೇಶವಾಗಿತ್ತು. ಆಮೇಲೆ ಕಥಾಪ್ರಸಂಗ ನಿರ್ಣಯವಾಗಿ ಅದಕ್ಕೆ ತಕ್ಕಂತೆ ವೇಷಗಳನ್ನು ಧರಿಸಿ ಕೆಲವು ಕ್ರಮಗಳೊಂದಿಗೆ ಆರಂಭವಾಗುವ ಆಟವು ಮಂಗಲ ಪದ್ಯದೊಡನೆ ಕೊನೆಗೊಳ್ಳುವುದು. ಚೌಕಿ ದೇವರಿಗೆ ಮಂಗಳಾರತಿಯೊಂದಿಗೆ ಪ್ರಾರಂಭವಾಗುವ ಆಟವು ಮುಕ್ತಾಯದಲ್ಲೂ ರಂಗಸ್ಥಳದಿಂದ ಚೌಕಿಗೆ ಬಂದು ದೇವರಿಗೆ ಮಂಗಳಾರತಿಯಾಗಿ ಮುಕ್ತಾಯವಾಗುವುದು ವಾಡಿಕೆ. ಹೀಗೆ ತಿರುಗಾಟದ ಮೂಲಕ ಸೇವೆಯಾಟ ನಡೆಸುವ ಮೇಳಗಳು ಪತ್ತನಾಜೆಯವರೆಗೆ ಎಂದರೆ ವೃಷಭ ಮಾಸ ಹತ್ತರ ವರೆಗೆ ಆಟಗಳನ್ನು ನಡೆಸಿ ವಾಪಾಸು ಹೊರಟಲ್ಲಿಗೆ ಬಂದು ಸೇರುವುವು. ಗೆಜ್ಜೆ ಬಿಚ್ಚುವ ಆಟದೊಂದಿಗೆ ಆ ಅವಧಿಯ ಆಟ ಕೊನೆಗೊಳ್ಳುವುದು. ಆಮೇಲೆ ಆಟದ ಕಲಾವಿದರಿಗೆ ಮಳೆಗಾಲದ ವಿಶ್ರಾಂತಿ.

**ಕಾಸರಗೋಡಿನ ಮೇಳಗಳ ಪ್ರಾಚೀನತೆ**

"ನಮ್ಮೀ ಸೀಮೆಯ ಗೌರವಸ್ಥ ಮನೆತನಗಳ ಸಾಲಿನಲ್ಲಿ ಕುಂಬಳೆಯ ನಾಯಕರ, ಕೂಡ್ಲು ಶ್ಯಾನುಭಾಗರ ಮತ್ತು ಇಚಲಂಪಾಡಿ ಗುತ್ತಿನ ಮನೆಗಳು ಮೊದಲಿನಿಂದಲೂ ಗಣ್ಯವಾಗಿವೆ. ಇವರಿಗೆ ಸಂಬಂಧಿಸಿದಂತೆ ಒಂದೂವರೆ ಶತಮಾನದಷ್ಟು ಹಿಂದೆಯೇ ಯಕ್ಷಗಾನ ಮೇಳಗಳಿದ್ದುವಾಗಿಯೂ, ಅವುಗಳು ಬಹಳಷ್ಟು ಪ್ರಸಿದ್ಧಿಗಳಿಸಿದ್ದುವಾಗಿಯೂ ಹಿರಿಯರ ಹೇಳಿಕೆಗಳಿಂದಲೂ ಒದಗುವ ಆಯಾ ಮನೆಗಳ ದಾಖಲೆ ಪತ್ರಗಳಿಂದಲೂ ತಿಳಿಯಲು ಸಾಧ್ಯವಿದೆ" – 1972 ರ ಅವಧಿಯಲ್ಲಿ ಬರೆದ ಲೇಖನವೊಂದರಲ್ಲಿ ಶೇಣಿ ಗೋಪಾಲಕೃಷ್ಣ ಭಟ್ಟರ ಹೇಳಿಕೆ.

ಪ್ರಾಚೀನ ಕಾಲದಿಂದಲೇ ದೇವಾಲಯಗಳನ್ನು ಕೇಂದ್ರವಾಗಿರಿಸಿಕೊಂಡು ಸ್ಥಾಪನೆಗೊಂಡ ಮೇಳಗಳು ಕಾಸರಗೋಡಿನಾದ್ಯಂತ ತಮ್ಮ ಅಸ್ತಿತ್ವವನ್ನು ಮೆರೆದಿವೆ. 17ನೇ ಶತಮಾನದಿಂದಲೇ ಮೇಳಗಳು ನೆಲೆಯಲ್ಲಿದ್ದುವು ಎನ್ನುವ ವಿಚಾರವನ್ನು ಶಿವರಾಮ ಕಾರಂತರು ತಮ್ಮ 'ಯಕ್ಷಗಾನ ಬಯಲಾಟ' ಕೃತಿಯಲ್ಲಿ ನಮೂದಿಸಿದ್ದಾರೆ. 1850-1950 ರ ಅವಧಿಯಲ್ಲಿ ಮೇಳಗಳು ಕರ್ನಾಟಕದ ಕರಾವಳಿ ಪ್ರದೇಶಗಳಲ್ಲಿ ಸಂಚರಿಸಿ ಕಾರ್ಯಕ್ರಮವನ್ನು ಪ್ರಕಟಿಸಿರುವುದಕ್ಕೆ ಹಲವಾರು

ಆಧಾರಗಳು ದೊರೆಯುತ್ತವೆ ಮತ್ತು ಯಕ್ಷಗಾನ ಲೇಖನಗಳು ಸಾಕ್ಷಿಯಿದಕ್ಕೆ ಎನ್ನುವ ಅಭಿಪ್ರಾಯಗಳು ವಿದ್ವಾಂಸರ ಕಡೆಗಳಿಂದ ಬಂದಿವೆ. ಮಧೂರಿನ ಉಳಿಯ ಮನೆ, ಎಡನೀರು ಮಠ, ಮಲ್ಲ ದುರ್ಗಾ ಪರಮೇಶ್ವರಿ ಕ್ಷೇತ್ರ ಯಕ್ಷಗಾನ ಕಲೆಯ ಪೋಷಕರು. ಕೆಲವೊಂದು ಸಂಘ ಸಂಸ್ಥೆಗಳು ಈ ನಿಟ್ಟಿನಲ್ಲಿ ದುಡಿಯುತ್ತಿವೆ.

**ಯಕ್ಷಗಾನ ಪರಂಪರೆಯನ್ನು ರೂಪಿಸಿರುವ ಕೆಲವು ಪ್ರಾಚೀನ ಮೇಳಗಳು**

ಕಾಸರಗೋಡಿನ ಸುತ್ತು ಮುತ್ತಲಿನಲ್ಲಿ ಸು. 35ಕ್ಕಿಂತಲೂ ಹೆಚ್ಚು ಯಕ್ಷಗಾನ ಮೇಳಗಳು ಹಾಗೂ ಸು. 50ಕ್ಕಿಂತಲೂ ಹೆಚ್ಚು ಯಕ್ಷಗಾನ ಕಲೆಯನ್ನು ಪ್ರೋತ್ಸಾಹಿಸುತ್ತಾ ಬಂದಿರುವ ಸಂಘ ಸಂಸ್ಥೆಗಳು ಪ್ರಸ್ತುತ ಕಾರ್ಯ ನಿರ್ವಹಿಸುತ್ತಿವೆ. ಇವುಗಳಲ್ಲಿ ಪ್ರಾಚೀನ ಎನ್ನಬಹುದಾದ ಹಾಗೂ ಇಂದಿನ ಯಕ್ಷಗಾನ ಕಲೆಯನ್ನು ರೂಪಿಸಿರುವ ಕೆಲವು ಮೇಳಗಳೆಂದರೆ, ಕಣಿಪುರ ಶ್ರೀ ಗೋಪಾಲಕೃಷ್ಣ ದಶಾವತಾರ ಮೇಳ, ಕುತ್ಯಾಳ ಶ್ರೀ ಗೋಪಾಲಕೃಷ್ಣ ಯಕ್ಷಗಾನ ನಾಟಕ ಸಭಾ(ದಶಾವತಾರ ಮಂಡಳಿ), ಕೊರಕೋಡು ಶ್ರೀ ದುರ್ಗಾಪರಮೇಶ್ವರಿ ದಶಾವತಾರ ಮೇಳ, ಇಚ್ಲಂಪಾಡಿ ಮೇಳ, ಮದನಂತೇಶ್ವರ ಸಿದ್ಧಿವಿನಾಯಕ ಯಕ್ಷಗಾನ ದಶಾವತಾರ ಮೇಳ, ಮಲ್ಲ ಶ್ರೀ ದುರ್ಗಾ ಪರಮೇಶ್ವರಿ ಯಕ್ಷಗಾನ ಕಲಾಮೇಳ –(ಸಜೀವ ಪ್ರವರ್ತಿಸುತ್ತಿದೆ), ಶ್ರೀ ಮಹಾವಿಷ್ಣುಮೂರ್ತಿ ಪ್ರಸಾದಿತ ಯಕ್ಷಗಾನ ಮೇಳ ಕುಂಟಾರು, ಮುಜಂಗಾವು ಪಾರ್ಥಸಾರಥಿ ದಶಾವತಾರ ಮೇಳ, ಶ್ರೀ ದುರ್ಗಾಪರಮೇಶ್ವರಿ ಯಕ್ಷಗಾನ ಮಂಡಳಿ ಕೊಲ್ಲಂಗಾನ, ಶ್ರೀ ಮಹಾಲಿಂಗೇಶ್ವರ ದಶಾವತಾರ ಮೇಳ ಅಡೂರು, ಶ್ರೀ ಗೋಪಾಲಕೃಷ್ಣ ಯಕ್ಷಗಾನ ಮಂಡಳಿ ಎಡನೀರು ಇತ್ಯಾದಿ ಪ್ರಸಿದ್ಧ, ಪುರಾತನ ಮೇಳಗಳ ಜೊತೆಗೆ ಕಾಸರಗೋಡು ಪರಿಸರದ ದೇವಾಲಯಗಳ ದೇವತೆಗಳ ಹೆಸರಲ್ಲಿ ನಡೆಯುತ್ತಿದ್ದ ಸಣ್ಣ ಪುಟ್ಟ ಮೇಳಗಳು ಇನ್ನೂ ಹಲವಾರಿವೆ. ಅನಂತರ ರೂಪುಗೊಂಡ ಯಕ್ಷಗಾನ ಸಂಬಂಧಿ ಸಂಘ ಸಂಸ್ಥೆಗಳು ಕಾಸರಗೋಡಿನಾದ್ಯಂತ ಬೇಕಾದಷ್ಟು ಸಂಖ್ಯೆಯಲ್ಲಿ ವ್ಯಾಪಿಸಿರುವುದು ಯಕ್ಷಗಾನ ಕಲೆಯ ಮಹತ್ವವನ್ನು ಸೂಚಿಸುತ್ತದೆ.

ಕಾಸರಗೋಡು ಪರಿಸರದ ಹೆಚ್ಚಿನ ಪ್ರಾಚೀನ ಮೇಳಗಳು 'ದಶಾವತಾರ ಮೇಳ' ಎನ್ನುವ ಹೆಸರಿನಲ್ಲಿ ಖ್ಯಾತಿ ಪಡೆದಿವೆ. ಇದರ ಹಿನ್ನೆಲೆಯನ್ನು ಗಮನಿಸಿದಾಗ ತಿಳಿದು ಬರುವ ಅಂಶಗಳೆಂದರೆ – "ಶ್ರೀಮನ್ನಾರಾಯಣನೂ ಲಕ್ಷ್ಮೀಯೂ ಜಗತ್ತಿನ ಸಂಕಷ್ಟಗಳ ಪರಿಹಾರಕ್ಕಾಗಿ ಹತ್ತು ಅವತಾರಗಳನ್ನು ಹೊತ್ತು ಜಗತ್ತಿನಲ್ಲಿ ಅವತರಿಸಿದ ವಿಷಯವೇ ದಶಾವತಾರದ ಕಥಾ ವಸ್ತು. ಕಾಲ ಕಳೆದು ಹೊಸತು ಹಳತನ್ನು ಹಿಂದೂಡಿದಾಗ, ಹಿಂದೆ ಕಳೆದು ಹೋದ ಈ ದಶಾವತಾರಗಳ ಕಥಾವಸ್ತುವನ್ನು ಜನತೆಗೆ ತಿಳಿಸುವಂತೆ, ಅದರಿಂದ ಪುಣ್ಯ ಸತ್ಕಾರ್ಯಗಳಿಗೆ ಉತ್ತೇಜನ ಕೊಡುವಂತೆ ಹುಟ್ಟಿಕೊಂಡ ಕಲೆಯೇ ಯಕ್ಷಗಾನ. ಇದನ್ನು ಆರಂಭಿಸಿದ ಮೇಳವೇ ಕುಂಬಳೆ ಸೀಮೆಯ ದಶಾವತಾರ ಮೇಳ"–(ತುಳುನಾಡಿನ ಗತವೈಭವ, ಪು; 198). ಎಂದರೆ ಜಗತ್ತಿನ ಸಂಕಷ್ಟಗಳ ಪರಿಹಾರಕ್ಕಾಗಿ ವಿಷ್ಣು ಎತ್ತಿದ ದಶಾವತಾರಗಳ ಕಥಾವಸ್ತುವನ್ನು ಜನತೆಗೆ ತಿಳಿಯಪಡಿಸಿ, ಆ ಮೂಲಕ ಸಮಾನ್ಯ ಜನತೆಯನ್ನು ಸತ್ಕಾರ್ಯಗಳ ಕಡೆಗೆ ನಡೆಸುವುದೇ ಈ ದಶಾವತಾರ ಮೇಳಗಳ ಉದ್ದೇಶವಾಗಿರುವಂತಿದೆ. ಆದ್ದರಿಂದಲೇ ಪ್ರಾಚೀನ ಮೇಳಗಳ ಹೆಸರುಗಳೆಲ್ಲವೂ ದಶಾವತಾರ ಮೇಳ ಎಂಬ ಶೀರ್ಷಿಕೆಯಲ್ಲಿಯೇ ಮೂಡಿ ಬಂದಿರುವುದು ಗಮನಾರ್ಹವಾಗಿದೆ.

ಮೇಳಗಳ ಪ್ರಾಚೀನತೆಗೆ ಸಂಬಂಧಪಟ್ಟಂತೆ ಕಣಿಪುರ ಶ್ರೀ ಗೋಪಾಲಕೃಷ್ಣ ದಶಾವತಾರ ಮೇಳ ಸು. 1790 ರಿಂದ 1918 ರವರೆಗೆ (ಆ ಮೇಲೆ 'ಕುಂಬಳೆ ಮೇಳ' ಎನ್ನುವ ಹೆಸರಲ್ಲಿ ಮರು ನಾಮಕರಣಗೊಂಡ ಈ ಮೇಳವು 1985 ರಿಂದ 1987 ರವರೆಗೆ ಅಸ್ತಿತ್ವದಲ್ಲಿತ್ತು), ಇಚ್ಲಂಪಾಡಿ ಮೇಳ ಸು. 1850 ರಿಂದ 1928 ರವರೆಗೆ, ಕುತ್ಯಾಳ ಶ್ರೀ ಗೋಪಾಲಕೃಷ್ಣ ಯಕ್ಷಗಾನ ನಾಟಕ ಸಭಾ ಸು. 1800 ರಿಂದ ಆರಂಭಗೊಂಡಿದೆ. ಆ ನಂತರ ಅಸ್ತಿತ್ವ ಕಂಡ ಹಲವಾರು ಮೇಳಗಳನ್ನು ರೂಪಿಸುವ ಕಾರ್ಯದಲ್ಲಿ ಈ ಮೇಲೆ ಹೆಸರಿಸಲಾದ ಪ್ರಾಚೀನ ಮೇಳಗಳ ಪಾತ್ರ ಗಣನೀಯವಾದುದು. ಇಲ್ಲಿಂದೀಚೆಗೆ ಹಲವಾರು ಮೇಳಗಳು, ಪ್ರತಿಷ್ಠಾನಗಳು, ಸಂಘ ಸಂಸ್ಥೆಗಳು ಬೆಳೆದು ಬಂದು ತಮ್ಮ ಕೊಡುಗೆಯನ್ನು ಯಕ್ಷಗಾನ ಸಾಹಿತ್ಯಕ್ಕೆ ನೀಡುವ ಮೂಲಕ ತಮ್ಮ ಅಸ್ತಿತ್ವವನ್ನು ಮೆರೆದಿವೆ. ಈ ಮೇಳಗಳು ಪ್ರಾರಂಭವಾದ ವರ್ಷಗಳನ್ನು ಗಮನಿಸುವಾಗ ಕುಂಬಳೆಯ ಮೇಳವು ಅತೀ ಪ್ರಾಚೀನ ಮೇಳವಾಗಿ ಗಮನ ಸೆಳೆಯುತ್ತದೆ.

ಪ್ರಾಚೀನ ಮೇಳಗಳ ಮೂಲಕ ರೂಪಕಲ್ಪನೆಗೊಂಡು ಬೆಳೆದುಬಂದ, ಬರುತ್ತಿರುವ ಹಲವು ಇತರ ಮೇಳಗಳು, ಯಕ್ಷಗಾನ ಸಂಬಂಧಿ ಸಂಘ ಸಂಸ್ಥೆಗಳು ಪ್ರಸ್ತುತ ಸಂದರ್ಭದಲ್ಲಿ ಅವುಗಳು ಸಮಾಜಕ್ಕೆ ನೀಡುತ್ತಿರುವ ಕೊಡುಗೆಗಳ ವಿಷಯವಾಗಿ ಹೇಳುವುದಾದರೆ, ಕಾಸರಗೋಡು ಪರಿಸರದ ಎರಡು ಯಕ್ಷಗಾನ ಸಂಶೋಧನ ಕೇಂದ್ರಗಳ ಕೆಲಸಗಳು ಮುಖ್ಯವೆನಿಸುತ್ತವೆ. ಕೀರಿಕ್ಕಾಡು ಸ್ಮಾರಕ ಯಕ್ಷಗಾನ ಸಾಂಸ್ಕೃತಿಕ ಅಧ್ಯಯನ ಕೇಂದ್ರ ಇವುಗಳಲ್ಲಿ ಒಂದಾದರೆ, ಪ್ರಮುಖವಾಗಿ ಸೂಚಿಸಬಹುದಾದ ಇನ್ನೊಂದು ಯಕ್ಷಗಾನ ಸಂಶೋಧನ ಕೇಂದ್ರವೆಂದರೆ ಕಾಸರಗೋಡು ಸರಕಾರಿ ಕಾಲೇಜಿನಲ್ಲಿರುವ ಯಕ್ಷಗಾನ ಸಂಶೋಧನಾ ಕೇಂದ್ರ. ಕಾಸರಗೋಡು ಅಭಿವೃದ್ಧಿ ಪ್ಯಾಕೇಜ್ ಅಂಗವಾಗಿ, ಡಾ. ಪ್ರಭಾಕರನ್ ಆಯೋಗದ ವರದಿಯನ್ವಯ ಕಾರಸಗೋಡಿಗೆ ಯಕ್ಷಗಾನ ಸಂಶೋಧನ ಕೇಂದ್ರ ಮಂಜೂರಾಗಿದೆ. ವಿದ್ಯಾನಗರದಲ್ಲಿರುವ ಕಾಸರಗೋಡು ಸರಕಾರಿ ಕಾಲೇಜಿನ ಕನ್ನಡ ವಿಭಾಗದಲ್ಲಿ ಈ ಯಕ್ಷಗಾನ ಸಂಶೋಧನ ಕೇಂದ್ರ ಕಾರ್ಯಾಚರಿಸುತ್ತಿದೆ. ಯಕ್ಷಗಾನ ಮ್ಯೂಸಿಯಂ, ಯಕ್ಷಗಾನ ಗ್ರಂಥಾಲಯವನ್ನು ಒಳಗೊಂಡ ಸಂಶೋಧನ ಕೇಂದ್ರವು ಆಗಿನ ಜಿಲ್ಲಾಧಿಕಾರಿಯವರ ನಿರ್ದೇಶನದೊಂದಿಗೆ ಸ್ಥಾಪನೆಯಾಗಿದೆ. ಮ್ಯೂಸಿಯಂನಲ್ಲಿ ಮುಖವರ್ಣಿಕೆಗಳು, ಹನುಮಂತನ ಕಿರೀಟ, ಸಿಂಹದ ಮುಖವಾಡ, ಕುತ್ತರಿ, ಕೋಲುಕಿರೀಟ, ಕೇಸರಿಪಟ್ಟಿ, ದೇವಿಮುಡಿ ಇತ್ಯಾದಿಗಳಿವೆ. ವೇಷಗಳಲ್ಲಿ ರಾಜವೇಷ, ಸ್ತ್ರೀವೇಷ, ಬಣ್ಣದ ವೇಷ, ತುರಾಯಿ ವೇಷ, ಗೆಜ್ಜೆಗಳಲ್ಲಿ ಮಾರ್ಮಲೆ ಗೆಜ್ಜೆ, ಕಾಲು ಕಡಗ, ಮಹಿಷಾಸುರನ ಕೊಂಬು, ವಿವಿಧ ಯಕ್ಷಗಾನ ಆಯುಧಗಳು ಇವೆ. ಯಕ್ಷಗಾನ ಸಂಬಂಧಿ ಹಲವು ಪುಸ್ತಕಗಳು ಗ್ರಂಥಾಲಯ ಸಂಗ್ರಹದಲ್ಲಿ ಇವೆ. ಅವುಗಳಲ್ಲಿ ಮುಖ್ಯವಾದುವು ಯಕ್ಷಗಾನ ಸಂಶೋಧನ ಗ್ರಂಥಗಳು, ಪ್ರಸಂಗ ಪುಸ್ತಕ, ಪಾರ್ತಿಸುಬ್ಬನ ಪ್ರಸಂಗಗಳು, ಪ್ರಸಿದ್ಧ ಪುರಾಣ ಕೃತಿಗಳು, ಯಕ್ಷಗಾನ ಸಂಬಂಧಿತ ಪ್ರಚಲಿತ ಪುಸ್ತಕಗಳು. –(ಕೃಪೆ: ವಿಜಯ ಕರ್ನಾಟಕ, 23 ಫೆಬ್ರವರಿ 2016)

**ಕೇಂದ್ರದ ವತಿಯಿಂದ ನಡೆದ ಯಕ್ಷಗಾನ ತರಬೇತಿ ಶಿಬಿರ**

ಕಾಸರಗೋಡು ಜಿಲ್ಲಾಡಳಿತದ ನೇತೃತ್ವದೊಂದಿಗೆ ಒಂದು ತಿಂಗಳ ಕಾಲದ (2017 ಜೂನ್ 1 ರಂದು ಆರಂಭ) ಯಕ್ಷಗಾನ ತರಬೇತಿ ಶಿಬಿರವು ಎಡನೀರು ಮಠದಲ್ಲಿ ನಡೆದಿತ್ತು. ಈ ಶಿಬಿರದಲ್ಲಿ ಯಕ್ಷಗಾನಕ್ಕೆ ಸಂಬಂಧ ಪಟ್ಟಂತೆ ನಾಟ್ಯ, ತಾಳ, ಪೂರಕವಾಗಿ ಹಿಮ್ಮೇಳ ಪರಿಚಯ, ಬಣ್ಣಗಾರಿಕೆ, ವೇಷಗಾರಿಕೆ, ಯಕ್ಷಗಾನ ಪ್ರಸಂಗ

ಸಾಹಿತ್ಯ ಇತ್ಯಾದಿ ವಿಷಯಗಳ ಕುರಿತು ತರಬೇತಿ, ಕಾರ್ಯಾಗಾರ, ವಿಶೇಷ ಉಪನ್ಯಾಸಗಳು ನಡೆದಿದ್ದುವು. ವಿವಿಧ ಯಕ್ಷಗಾನ ಆಸಕ್ತ ವಿದ್ಯಾರ್ಥಿಗಳು ಶಿಬಿರಾರ್ಥಿಗಳಾಗಿ ಭಾಗವಹಿಸಿದ್ದರು. ಯಕ್ಷಗಾನದಲ್ಲಿ ನುರಿತ ಸಂಪನ್ಮೂಲ ವ್ಯಕ್ತಿಗಳು ನಾಟ್ಯ ತರಬೇತುದಾರರಾಗಿ, ಉಪನ್ಯಾಸಕರಾಗಿ ಪಾಲ್ಗೊಂಡು ಶಿಬಿರಾರ್ಥಿಗಳ ಜ್ಞಾನ ಭಂಡಾರವನ್ನು ಹೆಚ್ಚಿಸುವಲ್ಲಿ ಸಹಕರಿಸಿದ್ದರು. ಕಾಸರಗೋಡಿಗೆ ಸಂಬಂಧಪಟ್ಟಂತೆ ಶಿಬಿರವು ಯಕ್ಷಗಾನದ ಇತಿಹಾಸದಲ್ಲಿಯೇ ಅಕಾಡೆಮಿಕ್ ರೂಪು ಪಡೆದದ್ದು ಮೊದಲ ಬಾರಿ ಎನ್ನಬಹುದು.

**ಸಿರಿಬಾಗಿಲು ವೆಂಕಪ್ಪಯ್ಯ ಪ್ರತಿಷ್ಠಾನ – ಕೊರೊನಾ ಯಕ್ಷ ಜಾಗೃತಿ ಯೋಜನೆ**

ಜಾಗತಿಕ ಮಟ್ಟದಲ್ಲಿಯೇ ಕೊರೊನಾ ವೈರಸ್‌ನಿಂದ ಜನಜೀವನ ತಲ್ಲಣಿಸುತ್ತಿದ್ದ ಸಂದರ್ಭದಲ್ಲಿ ಯಕ್ಷಗಾನ ಕಲೆ ಹಾಗೂ ಗೊಂಬೆಯಾಟದ ಮೂಲಕ ಜನಜಾಗೃತಿಗೆ ಪ್ರಯತ್ನಪಟ್ಟ ಸಿರಿಬಾಗಿಲು ವೆಂಕಪ್ಪಯ್ಯ ಪ್ರತಿಷ್ಠಾನದ ಕೊಡುಗೆಯನ್ನು ಇಲ್ಲಿ ಉಲ್ಲೇಖಿಸಲೇ ಬೇಕಾಗುತ್ತದೆ. ಕೊರೊನಾ ವೈರಸ್‌ನಿಂದ ಬರುವ ಸಾಂಕ್ರಾಮಿಕ ರೋಗವನ್ನು ತಡೆಗಟ್ಟುವ ನಿಟ್ಟಿನಲ್ಲಿ ಕನ್ನಡ, ಇಂಗ್ಲೀಷ್ ಹಾಗೂ ಹಿಂದಿ ಭಾಷೆಗಳಲ್ಲಿ ಕಲೆಯ ಮೂಲಕ ಜನಜಾಗೃತಿ ಮೂಡಿಸುವ ಕೆಲಸವನ್ನು ಸಿರಿಬಾಗಿಲು ವೆಂಕಪ್ಪಯ್ಯ ಸಾಂಸ್ಕೃತಿಕ ಪ್ರತಿಷ್ಠಾನ ಹಾಗೂ ಶ್ರೀ ಗೋಪಾಲಕೃಷ್ಣ ಬೊಂಬೆಯಾಟ ಸಂಘ ಮಾಡಿರುವುದು ಗಮನಾರ್ಹವಾಗಿದೆ. ಕಾಸರಗೋಡು ಸರಕಾರಿ ಕಾಲೇಜಿನ ಸಹಕಾರದೊಂದಿಗೆ ಸಾಮಾಜಿಕ ಜಾಲತಾಣಗಳ ಮೂಲಕ ಯಕ್ಷಗಾನ ಹಾಗೂ ಬೊಂಬೆಯಾಟಗಳನ್ನು ಪ್ರಸಾರ ಮಾಡುವ ಮೂಲಕ ಜನಸಾಮಾನ್ಯರ ಜೀವನದಲ್ಲಿ ಜಾಗೃತಿ ಮೂಡಿಸುವ ಉದ್ದೇಶದೊಂದಿಗೆ 'ಕೊರೊನಾ ಯಕ್ಷ ಜಾಗೃತಿ' ಯಕ್ಷಗಾನ ಬೊಂಬೆಯಾಟ ಪ್ರದರ್ಶನ ಯೋಜನೆಯು ರೂಪುಗೊಂಡಿದೆ.

"ಸಿರಿಬಾಗಿಲು ವೆಂಕಪ್ಪಯ್ಯ ಸಾಂಸ್ಕೃತಿಕ ಭವನ ನಿರ್ಮಾಣದ ತಯಾರಿಯಲ್ಲಿರುವಾಗಲೇ ಕೊರೊನಾ ಕಾಣಿಸಿಕೊಂಡು ತಡೆಯೊಡ್ಡಿತು. ಕೊರೊನಾ ಸಂಕಷ್ಟಕ್ಕೆ ಸ್ಪಂದಿಸುವ ಹೊಣೆಯು ಪ್ರತಿಯೊಬ್ಬ ಕಲಾವಿದನಿಗೂ ಇದೆ. ಸ್ವತಃ ನಾನು ಕಲಾವಿದನಾದ ಕಾರಣ ನಮ್ಮ ಸಂಸ್ಥೆಯ ನೇತೃತ್ವದಲ್ಲಿ ಯಕ್ಷಗಾನ ಬೊಂಬೆಯಾಟದ ಸಹಯೋಗದೊಂದಿಗೆ, ಇಂತಹ ಒಂದು ಮಹತ್ವದ ಯೋಜನೆಗೆ ಕೈ ಹಾಕಿದ್ದೇವೆ. ಈ ಮೊದಲು ಯಕ್ಷಗಾನ ಬಯಲಾಟದ ಮೂಲಕವೂ ಈ ರೋಗದ ಕುರಿತು ಜಾಗೃತಿ ಮೂಡಿಸಲು ಸಾಧ್ಯವಾಗಿತ್ತು. ಈಗ ಮೂರು ಭಾಷೆಗಳಲ್ಲಿ ಜಾಗತಿಕ ಮಟ್ಟದಲ್ಲಿ ಯಕ್ಷ ಜಾಗೃತಿಯನ್ನುಂಟುಮಾಡಲು ಈ ಹೊಸ ಪ್ರಯತ್ನಕ್ಕೆ ಕೈ ಹಾಕಿದ್ದೇವೆ" ಇದು ಯೋಜನೆಯ ಸಂದರ್ಭದಲ್ಲಿ ಪ್ರತಿಷ್ಠಾನದ ಅಧ್ಯಕ್ಷರಾದ ಸಿರಿಬಾಗಿಲು ರಾಮಕೃಷ್ಣ ಮಯ್ಯರವರು ಆಡಿದ ಮಾತು. –(ಪ್ರಜಾವಾಣಿ.ನೆಟ್ – 3 ಜುಲೈ 2020)

ಕೊರೊನಾದ ಬಗ್ಗೆ ಜನಜಾಗೃತಿ ಮೂಡಿಸುವ 'ಕೊರೊನಾ ಯಕ್ಷ ಜಾಗೃತಿ' ಎನ್ನುವ ಒಂದು ಗಂಟೆ ಅವಧಿಯ ಯಕ್ಷಗಾನವು ಯೂಟ್ಯೂಬ್ ಸಾಮಾಜಿಕ ಜಾಲತಾಣದಲ್ಲಿ ಪ್ರಸಾರವಾಗಿದೆ. ಈ ಯಕ್ಷ ಜಾಗೃತಿಯ ಪ್ರಸಂಗವನ್ನು ನೀರ್ಚಾಲಿನ ವರ್ಣ ಸ್ಟುಡಿಯೋದವರು, ಶ್ರೀ ಗಣೇಶ ಕಲಾವೃಂದ ಪೈವಳಿಕೆ ಇವರ ಸಹಕಾರದೊಂದಿಗೆ ಚಿತ್ರೀಕರಿಸಿದ್ದಾರೆ. ಯಕ್ಷಗಾನ ಪ್ರಸಂಗ ಪರಿಣತರಾದ ಡಿ.ಎಸ್.ಶ್ರೀಧರ ಹಾಗೂ ಪ್ರೊ.ಎಂ.ಎ.ಹೆಗಡೆಯವರು ಪ್ರಸಂಗ ಸಾಹಿತ್ಯ ರಚನೆ ಮಾಡಿದವರು.

ಹಿಮ್ಮೇಳದಲ್ಲಿ ಭಾಗವತರಾಗಿ ಸಿರಿಬಾಗಿಲು ರಾಮಕೃಷ್ಣ ಮಯ್ಯ, ಚೆಂಡೆಯಲ್ಲಿ ಶಂಕರ ಭಟ್ ನಿಡುವಜೆ, ಮದ್ದಲೆಯಲ್ಲಿ ಉದಯ ಕಂಬಾರ್, ಚಕ್ರತಾಳದಲ್ಲಿ ಶ್ರೀಮುಖ ಎಸ್.ಆರ್.ಮಯ್ಯ ಸಹಕರಿಸಿದ್ದಾರೆ. ಮುಮ್ಮೇಳದಲ್ಲಿ ರಾಧಾಕೃಷ್ಣ ನಾವಡ ಮಧೂರು ಇವರು ಕೊರೊನಾ ಪಾತ್ರಧಾರಿಯಾಗಿ, ವಾಸುದೇವ ರಂಗಭಟ್ ಮಧೂರು ಧನ್ವಂತರಿ ಪಾತ್ರದಲ್ಲಿ, ಜಯಪ್ರಕಾಶ್ ಶೆಟ್ಟಿ ಪೆರ್ಮುದೆ ರಾಜೇಂದ್ರನಾಗಿ, ಗುರುರಾಜ ಹೊಳ್ಳ ಬಾಯಾರು ಮಣಿಭದ್ರನಾಗಿ, ಕಿಶನ್ ಅಗ್ಗಿತ್ತಾಯ ನೆಲ್ಲಿಕಟ್ಟೆ ಮಣಿಕರ್ಣನಾಗಿ, ಶ್ರೀಕೃಷ್ಣ ಭಟ್ ದೇವಕಾನ, ಶಬರೀಶ್ ಮಾನ್ಯ, ಕಿರಣ್ ಕುದ್ರೆಕೂಡ್ಲು ಇವರು ಪುರಜನರ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. –(ಕೃಪೆ: ಕನ್ನಡ.ಎಷ್ಯನೆಟ್ ನ್ಯೂಸ್.ಕೋಮ್)

ಶ್ರೀ ಗೋಪಾಲಕೃಷ್ಣ ಯಕ್ಷಗಾನ ಬೊಂಬೆಯಾಟ ಸಂಘವು ತೆಂಕುತಿಟ್ಟು ಶೈಲಿಯ ಏಕೈಕ ಬೊಂಬೆಯಾಟ ತಂಡವಾಗಿದೆ. ಈ ತಂಡವು ಕರ್ನಾಟಕ ಹಾಗೂ ಕೇರಳ ರಾಜ್ಯಗಳ 'ರಾಜ್ಯ ಪ್ರಶಸ್ತಿ' ಪುರಸ್ಕೃತ ತಂಡ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಈ ಸಂಘವು ಪಾರ್ತಿಸುಬ್ಬನ ವಂಶಸ್ಥರಾದ ಕಲ್ಲಕಟ್ಟ ವಿದ್ವಾನ್ ಲಕ್ಷ್ಮೀನಾರಾಯಣಯ್ಯ ಹಾಗೂ ಕೆ.ವೆಂಕಟಕೃಷ್ಣಯ್ಯನವರಿಂದ ರೂಪುಗೊಂಡಿದೆ. ಪಾಕಿಸ್ತಾನದ ಲಾಹೋರ್, ಫ್ರಾನ್ಸಿನ ಪ್ಯಾರಿಸ್, ದುಬೈ, ಜೆಕೋಸ್ಲವಾಕಿಯಾದ ಪ್ರಾಗ್, ಚೈನಾದ ಗುಯ್ಯಾಂಗ್ ಮೊದಲಾದ ಕಡೆಗಳಲ್ಲಿ ಅಲ್ಲದೆ, ದೇಶ ವಿದೇಶಗಳಲ್ಲಾಗಿ 3000ಕ್ಕಿಂತಲೂ ಅಧಿಕ ಬೊಂಬೆಯಾಟಗಳನ್ನು ಪ್ರದರ್ಶಿಸಿದ ಕೀರ್ತಿ ಈ ಸಂಸ್ಥೆಯದು.

ಒಟ್ಟಿನಲ್ಲಿ ತೆಂಕುತಿಟ್ಟಿನ ಯಕ್ಷಗಾನಕ್ಕೆ ಸಂಬಂಧಪಟ್ಟಂತೆ ಯಕ್ಷಗಾನದ ಹುಟ್ಟಿನ ಹಿನ್ನೆಲೆಯಲ್ಲಿ ದೇವಾಲಯ ಸಂಸ್ಕೃತಿಯ ಆರಾಧನೆಗೆ ಸಂಬಂಧಪಟ್ಟ ವಿಷಯಗಳು ಕೆಲಸಮಾಡಿರುವುದು ಕಂಡುಬರುತ್ತದೆ. ಯಕ್ಷಗಾನಕ್ಕೆ ಹಾಗೂ ದೇವಾಲಯಗಳ ದೈವಿಕ ಕ್ರಿಯೆಗಳಿಗೆ ಸಾಮ್ಯತೆಯಿರುವುದು ಯಕ್ಷಗಾನವು ದೇವಾಲಯಗಳ ಸಂಬಂಧವನ್ನು ಹೊಂದಿ ಬೆಳೆದು ಬಂದಿರುವುದನ್ನು ಸೂಚಿಸುತ್ತದೆ. ಇನ್ನು ಈ ಕಲೆಯ ಪೋಷಕರು ದೇವಾಲಯಕ್ಕೆ ಸಂಬಂಧಪಟ್ಟ ವ್ಯಕ್ತಿಗಳೇ ಆಗಿರುವುದು ಮತ್ತು ಕಲಾವಿದರು ದೈವ ಸಂಬಂಧಿ ವಿಷಯಗಳನ್ನು ತಿಳಿದವರಾಗಿರುವುದು, ಮೇಲಿನ ವಿಚಾರವನ್ನು ಪುಷ್ಟೀಕರಿಸುತ್ತದೆ. ಅತೀ ಪ್ರಾಚೀನ ಕಾಲಗಳಿಂದಲೂ ಇದ್ದಂತಹ ದಶಾವತಾರ ಮೇಳಗಳು ಈಗ ಹಲವು ಮೇಳಗಳಾಗಿ ವಿಭಜಿಸಲ್ಪಟ್ಟಿವೆ. ಕೆಲವೊಂದು ಮೇಳಗಳು ನಾಮಾವಶೇಷಗೊಂಡಿವೆ. ಕಾಸರಗೋಡು ಪರಿಸರದ ಹಲವಾರು ಕಲಾವಿದರನ್ನು ಬೆಳಕಿಗೆ ತಂದ ಕೀರ್ತಿ ಈ ಮೇಳಗಳಿಗೆ ಸಲ್ಲುತ್ತದೆ. ವ್ಯವಸ್ಥಿತ ಟೆಂಟ್ ಟಿಕೇಟಿನ ಪ್ರದರ್ಶನ, ಅದಕ್ಕಾಗಿ ಹೊಸ ಪ್ರಸಂಗ ಸಾಹಿತ್ಯದ ರಚನೆ, ಮೇಳದ ದೀಪದ ವ್ಯವಸ್ಥೆಯಲ್ಲಿ ಪ್ರಗತಿ, ಜನಾಕರ್ಷಕ ವೇಷಭೂಷಣಗಳ ತಂತ್ರ, ಎರಡು ಪ್ರಸಿದ್ಧ ಮೇಳಗಳು ಸೇರಿಕೊಂಡು ನಡೆಸುವ ಜೋಡಾಟಗಳ ಪ್ರದರ್ಶನ ಇತ್ಯಾದಿಗಳು ಪ್ರಾಚೀನ ಕಾಲದ ಮೇಳಗಳ ವೈಶಿಷ್ಟ್ಯಗಳಾಗಿವೆ.

ಪ್ರಾಚೀನ ಮೇಳಗಳ ಮೂಲಕ ರೂಪು ಕಲ್ಪನೆಗೊಂಡ ಹಲವು ಮೇಳಗಳು, ಸಂಘ ಸಂಸ್ಥೆಗಳು, ಪ್ರತಿಷ್ಠಾನಗಳು, ಬೊಂಬೆಯಾಟ ತಂಡ ಇತ್ಯಾದಿಗಳು ಕಾಸರಗೋಡಿನ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅಲ್ಲದೆ, ದೇಶ ವಿದೇಶಗಳಲ್ಲಿ ಯಕ್ಷಗಾನ ಕಲೆಯ ಕೀರ್ತಿಯನ್ನು ಗಗನದೆತ್ತರಕ್ಕೆ ಏರಿಸುವಲ್ಲಿ ಸಹಕರಿಸಿವೆ. ಯಕ್ಷಗಾನ ಸಂಶೋಧನ ಕೇಂದ್ರಗಳು, 'ಕೊರೊನಾ ಯಕ್ಷ ಜಾಗೃತಿ' ಯೋಜನೆ ಇತ್ಯಾದಿಗಳು ಯಕ್ಷಗಾನ ಕಲೆಯನ್ನು ಬೆಳೆಸುವುದರ ಜೊತೆಗೆ ಕೊರೊನಾ ವೈರಸ್‌ನಿಂದ ಹರಡುವ ಸಾಂಕ್ರಾಮಿಕ ರೋಗವನ್ನು ತಡೆಗಟ್ಟುವಂತಹ ಜನಜಾಗೃತಿಯನ್ನು ಮೂಡಿಸುವಲ್ಲಿ ಯಶಸ್ವಿಯಾಗಿವೆ. ಕಾಸರಗೋಡು ಪರಿಸರದಲ್ಲಿ ಕ್ರಮೇಣ ಹುಟ್ಟಿಕೊಂಡ ಅನೇಕ ಮೇಳಗಳು ಹಾಗೂ ಈ ಕಲೆಗೆ ಪ್ರೋತ್ಸಾಹ ಕೊಡುತ್ತಿರುವ ಸಂಘ ಸಂಸ್ಥೆಗಳ ಸಂಖ್ಯೆಗಳನ್ನು ಗಮನಿಸುವಾಗ

ಈಗಲೂ ಆರಾಧನಾ ರೂಪವಾದ ಯಕ್ಷಗಾನ ಕಲೆಗೆ ಜನತೆ ನೀಡುತ್ತಿರುವ ಪ್ರಾಧಾನ್ಯತೆಯ ಅರಿವಾಗುತ್ತದೆ.

## ಗ್ರಂಥ ಋಣ


1. ತುಳುನಾಡಿನ ಗತವೈಭವ – ಉದಯವರ್ಮರಾಜ, ಕನ್ನಡ ಸಾಹಿತ್ಯ ಪರಿಷತ್ತು, 1998.
2. ತೆಂಕನಾಡ ಯಕ್ಷಗಾನ – ಡಾ.ಉಪ್ಪಂಗಳ ಯಕ್ಷಗಾನ, ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ, 2017.
3. ಪತ್ರಿಕೆಗಳು
4. ವಿಜಯ ಕರ್ನಾಟಕ – 23 ಫೆಬ್ರವರಿ 2016.
5. ಪ್ರಜಾವಾಣಿ.ನೆಟ್ – 3 ಜುಲೈ 2020
6. ಕನ್ನಡ.ಏಷ್ಯನೆಟ್ ನ್ಯೂಸ್.ಕೋಮ್